ಪರಿಶೀಲಿಸಿದ ನಂತರ ಕರಡು ನಿಯಮಾವಳಿಯನ್ನು ಅಂತಿಮಗೊಳಿಸಿ ನಿಯಮಾವಳಿಯ ಷರತ್ತುಗಳನ್ನು ಪೂರೈಸಿದ 24 ಜನರ ಸೇವೆಯನ್ನು ಖಾಯಂಗೊಳಿಸಲಾಗಿದೆ.

ಆ) ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಕೆಲವು ನೌಕರರು ಸದರಿ ನೇಮಕಾತಿಯ ನಿಯಮಗಳ ಅನುಬಂಧವನ್ನು ರದ್ದುಪಡಿಸುವಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿಯನ್ನು ದಾಖಲಿಸಿರುತ್ತಾರೆ. ಈ ಬಗ್ಗೆ ನ್ಯಾಯ ಮಂಡಳಿಯ ತೀರ್ಪನನ್ನು ನಿರೀಕ್ಷಿಸಲಾಗಿದೆ.

ಇ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಕೆಯಲ್ಲಿ ಲಭ್ಯವಿದ್ದ ಮಾಹಿತಿಯನ್ನು ಕಡತದಲ್ಲಿ ಸಚಿವ ಸಂಪುಟಕ್ಕೆ ನೀಡಲಾಗಿದ್ದು ಸಚಿವ ಸಂಪುಟದ ತೀರ್ಮಾನದಂತೆ 28 ಜನರ ಸೇವೆಯನ್ನು ಖಾಯಂಗೊಳಿಸಲು ವಿಶೇಷ ನಿಯಮಾವಳಿಯನ್ನು ರಚಿಸಲಾಗಿದ್ದು ನಿಯಮಾವಳಿಯ ಷರತ್ತುಗಳನ್ನುಪೂರೈಸಿದ 24 ಜನರ ಸೇವೆಯನ್ನು ಖಾಯಂಗೊಳಿಸಲಾಗಿದೆ.

ಪ್ರಶ್ನೆ ಸಂಖ್ಯೆ : 64 (82) ಶ್ರೀ ನರಸಿಂಹನಾಯಕ್ (ರಾಜೂಗೌಡ)

ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಸೂರಪುರ ತಾಲ್ಲೂಕಿನಲ್ಲಿ ಅನೇಕ ಪ್ರವಾಸಿ ತಾಣಗಳು ಹಾಗೂ ಪ್ರೇಕ್ಷಣಿಯ ಸ್ಥಳಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಈ ಪ್ರವಾಸಿ ತಾಣ ಹಾಗೂ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ.ಶ್ರೀರಾಮಲು

ಅ) ಹೌದು

ಆ) ಸುರಪುರ ತಾಲ್ಲೂಕಿನಲ್ಲಿ ಕೆಲವು ಚಾರಿತ್ರಕ ಸ್ಮಾರಕಗಳಿದ್ದು ಇಲ್ಲಿನ ನಾರಾಯಣಪುರದ ಬಳಿ ಛಾಯಾಭಗವತೀ ದೇವಾಲಯವು ಪ್ರಸಿದ್ಧವಾಗಿದೆ.

ಇಲ್ಲಿಂದ 3 ಕಿ.ಮೀ. ಕೆಳಗೆ ಕೃಷ್ಣಾ ನದಿಯು 60 ಮೀಟರ್ ಆಳಕ್ಕೆ ಧುಮುಕಿ ಜಲಪಾತ ನಿರ್ಮಿಸಿದೆ. ಸುರಪುರದಲ್ಲಿರುವ ಗೋಪಾಲಸ್ವಾಮಿಯಗುಡಿ, ಅರಮನೆ ಮತ್ತು ಕೋಟೆಯ ಅವಶೇಷಗಳು ಪ್ರೇಕ್ಷಣೀಯ ಸ್ಥಳಗಳಾಗಿವೆ.

ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಅಂಕಿ ಸಂಖ್ಯೆ ಹಾಗೂ ನಿವೇಶನಗಳ ಲಭ್ಯತೆಯ ಬಗ್ಗೆ ಖಚಿತ ಮಾಹಿತಿ ಪಡೆದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಪ್ರಶ್ನೆ ಸಂಖ್ಯೆ : 68 (205) ಶ್ರೀ ನಿಂಗಪ್ಪ ಹೆಚ್. (ಕುಣಿಗಲ್)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಕೆ.ಪಿ.ಟಿ.ಸಿ.ಎಲ್. ನಿಂದ ಮಂಜೂರಾಗದ ವಿದ್ಯುತ್ ಉಪ ಸ್ಥಾವರಗಳ ನಿರ್ಮಾಣಕ್ಕೆ ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ಸ್ಥಾವರಗಳ ನಿರ್ಮಾಣ ವಿಳಂಬವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾದಿದ್ದಲ್ಲಿ, ಖಾಸಗಿ ಜಮೀನುಗಳನ್ನು ಆಯಾ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಮಾರುಕಟ್ಟೆ ಬೆಲೆಗೆ ಖರೀದಿಸಿ ಉಪಸ್ಥಾವರ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ, ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಹೆಚ್.ಡಿ.ರೇವಣ್ಣ

ಅ) ಈ ಹಿಂದೆ, ಕೆ.ಪಿ.ಟಿ.ಸಿ.ಎಲ್. ಮತ್ತು ವಿದ್ಯುತ್ ಸರಬರಾಜು ಕಂಪನಿಗಳಿಂದ ಮಂಜೂರಾಗುತ್ತಿದ್ದ ವಿದ್ಯುತಂ ಉಪ–ಕೇಂದ್ರಗಳ ನಿರ್ಮಾಣಕ್ಕೆ ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆ ವಿದ್ಯುತ್ ಉಪ ಕೇಂದ್ರಗಳ ನಿರ್ಮಾಣ ವಿಳಂಬವಾಗುತ್ತಿತ್ತು. ಆದರೆ, ಈಗ ಆಸಗಿ ಜಮೀನುಗಳನ್ನು ಕ.ವಿ.ಪ್ರ.ನಿ.ನಿ.ಯು ಸರ್ಕಾರಿ ಭೂಮಿ ಲಭ್ಯವಿಲ್ಲದ ಕಡೆಗಳಲ್ಲಿ ನೇರವಾಗಿ ಖರೀದಿ ಮಾಡಲು ಸರ್ಕಾರವು ಕರ್ನಾಟಕ ಭೂ ಸುಧಾರಣೆ ಕಾಯ್ದೆಯಲ್ಲಿ ತಿದ್ದುಪಡಿ ಮಾಡಿ